# ಜೀವಸಮುದ್ರ

ಪೂರ್ವಿಕರು ಬದುಕನ್ನು ಸಮುದ್ರಕ್ಕೆ ಹೋಲಿಸಿದ್ದುಂಟು. 'ಭವಾಬ್ಧಿ' ಎಂದು ದಾಸರು ರೂಪಕದ ಭಾಷೆಯಲ್ಲಿ ಕರೆದಿದ್ದಾರೆ. ಜೀವನ ಎಂದರೆ ಇದರ ಅರ್ಥ ಏನು? ಅದರ ವ್ಯಾಪ್ತಿ ಎಷ್ಟು? ನಾವು ಇದನ್ನು ತಿಳಿಯುವ ಬಗೆ ಹೇಗೆ? ಈ ಪ್ರಶ್ನೆಯು ಆಧುನಿಕರಾದ ನಮ್ಮನ್ನು ಕಾಡುತ್ತಿರುವಂತೆ; ನಮ್ಮ ಪೂರ್ವಿಕರಿಗೂ ಕಾಡಿದ್ದುಂಟು. ಜೀವನ ಎಂದರೆ ಸ್ಥೂಲವಾಗಿ 'ಕಾಡುವುದು' ತಾನೆ? ಪ್ರಶ್ನೆಗಳ ಮೂಲಕ ಉತ್ತರಲೋಕಕ್ಕೆ ನಾವು ಹೋಗಬೇಕಾಗುತ್ತದೆ. 'ಭವ' ಎಂದರೆ ಸಂಸಾರ. 'ಭವಾಬ್ಧಿ' ಎಂದರೆ ಸಂಸಾರ ಎಂಬ ಸಾಗರ. ನಾವು ಸಾಗರದ ತೀರದಲ್ಲಿ ನಿಂತು ನೋಡಿದರೆ, ಕಣ್ಣಳತೆಗೆ ಸಾಗರದ ತುದಿ ಕಾಣುವುದಿಲ್ಲ. ಸಮುದ್ರ ತೀರದಲ್ಲಿ ಕೇವಲ ನೊರೆತೆರೆಗಳು ಮಾತ್ರ ಕಾಣುತ್ತವೆ. ಇಂಥ ತೆರೆಗಳನ್ನು ಸಂಸ್ಕೃತದಲ್ಲಿ 'ಊರ್ಮಿ' ಎಂದು ಕರೆಯುತ್ತಾರೆ. ಇಂಥ ಊರ್ಮಿಗಳು ಆರು. ಪಾರಿಭಾಷಿಕವಾಗಿ 'ಷಡೂರ್ಮಿ' ಎಂದು ತಾತ್ವಿಕರು ಸಪಿಂಡೀಕರಣ ಮಾಡಿ ನಮಗೆ ತೋರಿಸಿದರು.

ಪ್ರಮುಖವಾಗಿ ಜೀವಸಮುದ್ರದಲ್ಲಿ ಆರು ತೆರೆಗಳುಂಟು. ಅವು ಒಂದೊಂದು ಜೋಡಿ. ಮೊದಲನೆಯ ಜೋಡಿ ಕ್ಷುತ್–ಪಿಪಾಸೆ; ಎರಡನೆಯದು ಶೋಕಮೋಹ; ಇನ್ನು ಮೂರನೆಯ ಜೋಡಿ ಜರಾ–ಮರಣ! ಈ ಆರು ಜೋಡಿಗಳನ್ನು ಸರಿಯಾಗಿ ಗಮನಿಸಿದರೆ 'ಬಾಳು' ನಮಗೆ ಅರ್ಥವಾಗುತ್ತದೆ. ನಮಗೆ ಸಮುದ್ರ ಕಾಣುವುದಿಲ್ಲ ನಿಜ. ಆದರೆ, ಜೀವಸಮುದ್ರದ ಆರುತೆರೆಗಳ ಅನುಭವದಲ್ಲಿಯೇ ನಾವು ಇರುತ್ತೇವೆ. ಈ ಷಡೂರ್ಮಿಗಳೇ ನಮ್ಮ ಕಲೆ, ಸಾಹಿತ್ಯ, ಅಧ್ಯಾತ್ಮ, ಶಾಸ್ತ್ರಗಳನ್ನು ವ್ಯಾಪಿಸಿಕೊಂಡಿವೆ. ನಮ್ಮ ದೇಶದ ಯಾವುದೇ ಕಥನಗಳನ್ನು ತೆಗೆದುಕೊಂಡರೆ ಈ ಆರರಲ್ಲಿ ಯಾವುದಾದರೊಂದೊ ಎರಡೊ ಕಥಾನಕವಾಗಿ ಕಂಡು ಬರುವುದುಂಟು.

ಕ್ಷುತ್–ಪಿಪಾಸೆ: ಈಗ ಮೊದಲನೆಯ ಜೋಡಿಯನ್ನು ಗಮನಿಸೋಣ. ಕ್ಷುತ್ – ಎಂದರೆ ಹಸಿವು. ಆಗ ತಾನೆ ಹುಟ್ಟಿದ ಮಗು ಅಳುತ್ತದೆ. ಅದಕ್ಕೆ ಎರಡು ಮೂರು ತೊಟ್ಟು ಹಾಲನ್ನು ಹನಿಸಿದರೆ ಸುಮ್ಮನಾಗುತ್ತದೆ. ಇನ್ನು ತಾಯಿಯ ಹಾಲು ಸಿಕ್ಕಿದಾಗ ಹಸಿವು ಹಿಂಗುತ್ತದೆ. ಈ ಲೋಕದ ಸಂಬಂಧ ಒಬ್ಬ ಜೀವಿಗೆ ಪ್ರಾರಂಭವಾಗುವುದೇ ಹಸಿವಿನ ಮೂಲಕ. ಈ ಹಸಿವು ಮುಂದೆ ಅಧ್ಯಾತ್ಮದ ಹಸಿವಾಗಿ ಮಾರ್ಪಾಟಾಗುವುದುಂಟು. ಅದು ಆ ಜೀವಿಯ ಬೆಳಕಿನ ಪುಟಗಳು ತೆರೆದಾಗ ಮಾತ್ರ. ಇನ್ನು 'ಪಿಪಾಸೆ'ಯೆಂದರೆ ಬಾಯಾರಿಕೆ, ಹಸಿವಾದಾಗ ಆಹಾರ ಬೇಕಷ್ಟೆ. ಆಹಾರದ ಜತೆ ನೀರು ಬೇಕೇಬೇಕು. ಈ ಜೀವದ ಬಾಯಾರಿಕೆಗೆ ನೀರು ಬೇಕೇಬೇಕು. ಇವೆರಡು ಅವಿಗಲಿತ ಸಂಬಂಧ. ನಮ್ಮ ಬಾಳು ಪ್ರಾರಂಭವಾಗುವ ಮೊದಲ ಬಿಂದು ಹಸಿವಾದರೆ; ಅದರ ಮುಂದಿನ ಬಿಂದು ಬಾಯಾರಿಕೆ. ಬಾಳಿನಲ್ಲಿ ಒಬ್ಬೊಬ್ಬರು ಭೂಮಿಯ ಸೆಳೆತದಲ್ಲಿಯೇ ಇರಬಲ್ಲರು ಅಥವ ಅದನ್ನು ಮೀರಿ ಹೋಗಬಲ್ಲರು. ಹಸಿವು ಬಾಯಾರಿಕೆಗೆ ಎರಡು ಪಾತಳಿಗಳುಂಟು. ಅದು ಲೋಕಕ್ಕೆ ಅಂಟಿಕೊಂಡಾಗ ಅರ್ಥದ ಪರಿವೇಶ ಒಂದು ಬಗೆಯಾದರೆ; ಈ ಲೋಕದಿಂದ ವಿಸರ್ಜನೆಗೊಂಡಾಗ ಇನ್ನೊಂದು ಬಗೆಯ ಅಲೌಕಿಕ ಅರ್ಥ. ಇದು ಶುದ್ಧಾಂಗವಾಗಿ ದೈಹಿಕ ವ್ಯಾಪಾರಕ್ಕೆ ಸಂಬಂಧಿಸಿದ್ದು.

ಶೋಕ–ಮೋಹ: ವಾಲ್ಮೀಕಿರಾಮಾಯಣದ ಕಥನ ಪ್ರಾರಂಭವಾಗುವುದೇ ಶೋಕದಿಂದ. 'ಶೋಕಃ ಶ್ಲೋಕತ್ವಮಾಗತಃ' ಎಂದು ಲಾಕ್ಷಣಿಕರು ಹೇಳಿದ್ದುಂಟು. ಇವೆರಡು ಮಾನಸಿಕ ಲೋಕಕ್ಕೆ ಸಂಬಂಧಿಸಿದ್ದು. ವಾಲ್ಮೀಕಿಮುನಿ ಸರಯೂ ನದಿ ತೀರಕ್ಕೆ ಬಂದಿದ್ದಾನೆ. ಸುತ್ತಣ ಪ್ರಕೃತಿ ರಮ್ಯವಾಗಿದೆ. ವಾಲ್ಮೀಕಿ ರಮ್ಯಪ್ರಕೃತಿಯ ಮೋಹಕ್ಕೆ ಒಳಗಾಗಿದ್ದಾನೆ. ಅವನ ಕಣ್ಣು ಆಗಸದತ್ತ ಸುಳಿದಿದೆ. ಅಲ್ಲಿ ಚಕ್ರವಾಕ ಪಕ್ಷಿಗಳು ಆಡುತ್ತಿವೆ. ಇದ್ದಕ್ಕಿದ್ದಂತೆ ಚಕ್ರವಾಕ ಪಕ್ಷಿಗಳಲ್ಲಿ ಒಂದು ನೆಲಕ್ಕೆ ಬಿದ್ದು ಹೊರಳಾಡಿದೆ. ಕೆಲವೇ ಕ್ಷಣಗಳ ಹಿಂದೆ ಮುನಿ ಮೋಹದ ಆವರಣದಲ್ಲಿದ್ದ; ಈಗ ಅವನ ಮನಸ್ಸು ಶೋಕದ ನೆಲೆಯಾಯಿತು. ಭಾರತೀಯ ಸಾಹಿತ್ಯವೆಲ್ಲವೂ ಶೋಕ–ಮೋಹಗಳಿಂದ ತುಂಬಿಕೊಂಡಿದೆ. ನಮ್ಮ ದೇಶದ ಸಾಹಿತ್ಯಸಾಗರದಲ್ಲಿ ಇವೆರಡೂ ಪ್ರಧಾನ ವಸ್ತುಗಳಾಗಿ ಧಾರಣೆ ಮಾಡಿವೆ. ಶೋಕವು ವಿಶೋಕವಾದಾಗ, ಮೋಹವು ವಿಮೋಹವಾದಾಗ 'ಜೀವಸಮುದ್ರದ' ಅಂತರಂಗದ ಅರಿವು ಮೈದೋರುತ್ತದೆ. 'ಶೋಕ–ಮೋಹ ವಿವರ್ಜಿತಃ' ಎಂದು ಗೀತೆ ಇದನ್ನೇ ಸಾರಿದೆ. ಕುವೆಂಪು ಒಂದೆಡೆ 'ಶೋಕಮೋಹವನಳಿಸಿ'ಕೊಂಡಾಗ ಆನಂದದ ಸಾಗರ ನಮ್ಮದಾಗುತ್ತದೆಂದು ಹೇಳುತ್ತಾರೆ.

ಜರಾಮರಣ: ಬುದ್ಧನು ಜೀವನದಲ್ಲಿ 'ಮುಪ್ಪುಮರಣ'ವನ್ನು ಕಾಣುತ್ತಾನೆ. ಲೋಕವು ದುಃಖಮಯವಾಗಿದೆ ಎಂಬ ಅರಿವು ಅವನಿಗೆ ಬಂದೊದಗಿದೆ. ಜರಾ–ಎಂದರೆ ಮುಪ್ಪು. ದೇಹಕ್ಕೆ ಮುಪ್ಪು ಕವಿದಾಗ ದುಃಖ ಬಂದು ಅಡರುತ್ತದೆ. ಆಗ ರೋಗಗಳು ಮುತ್ತಿಗೆ ಹಾಕುತ್ತವೆ! ಮಾನಸಿಕವಾಗಿ ಅವನು ನರಳುವುದುಂಟು. ನಮಗೆ ವೈಯಕ್ತಿಕವಾಗಿ 'ಮರಣ'ದ ಅನುಭವವಿಲ್ಲ. ಆದರೆ, ದೇಹಕ್ಕೆ ಮುಪ್ಪು ಆವರಿಸಿದಾಗ, ದೇಹದ ಒಂದೊಂದು ಅಂಗಗಳು ಶಕ್ತಿಹೀನಗೊಂಡಾಗ; ಮರಣಪೂರ್ವದ ಅನುಭವ ಸಾಮಾನ್ಯವಾಗಿ ಆಗುವುದುಂಟು. ದುಃಖದ ರಾಶಿಯನ್ನು ಕಿತ್ತೊಗೆದು ನಿಂತಾಗ 'ಜರಾ ಮರಣಜಂ ಭಯಂ' ಇಲ್ಲವಾಗುತ್ತದೆ. ಸಾಹಿತ್ಯವು ಜರಾ–ಮರಣವನ್ನು ಹಲವು ಬಗೆಗಳಲ್ಲಿ ಚಿತ್ರಿಸಿದೆ. ಮಹಾಭಾರತದ ಭೀಷ್ಮ, ರಾಮಾಯಣದ ರಾವಣ, ಭಾಗವತದ ಶ್ರೀಕೃಷ್ಣ ಇವರು ಜರೆಗೂ ಜಗ್ಗಿದವರಲ್ಲ; ಮರಣಕ್ಕೂ ಅಂಜಿದವರಲ್ಲ. ದೇಹಕ್ಕೆ ಮುಪ್ಪುಂಟು; ಸಾವುಂಟು. ಆದರೆ, ಮನಸ್ಸಿಗೆ ಮುಪ್ಪೆಲ್ಲಿದೆ; ಮರಣವೆಲ್ಲಿದೆ? ಒಬ್ಬ ಉನ್ನತ ವ್ಯಕ್ತಿ ತನ್ನ ಆಯುರ್ಮಾನದಲ್ಲಿ ತನ್ನ ಜೀವನಶೈಲಿಯಿಂದ ಮುಪ್ಪು–ಸಾವನ್ನು ಮೀರಿಬಿಡುತ್ತಾನೆ. ಭೌತಿಕವಾಗಿ ಮುಪ್ಪು–ಸಾವು ಕಾಣುವುದುಂಟು. ಆದರೆ, ಅಧ್ಯಾತ್ಮದ ದೃಷ್ಟಿಯಿಂದ ಮುಪ್ಪು–ಸಾವನ್ನು ಅಂಥವರು ಆಹ್ವಾನಿಸುವುದುಂಟು.

ಜೀವನ ಎಂಬುದು ಒಂದು ಸಮುದ್ರ. ಆ ಸಮುದ್ರಕ್ಕೆ ತೆರೆಗಳಿದ್ದಂತೆ ಜೀವನಸಮುದ್ರಕ್ಕೂ ತೆರೆಗಳಿವೆ. ತೆರೆಗಳ ಪರಂಪರೆ ನಿತ್ಯನಿರಂತರ. ಆದರೆ, ಜೀವವು ಅದನ್ನು ಆನಂದದಿಂದ ಸ್ವೀಕರಿಸಬೇಕು. ಈ ಆನಂದವು ಅವನನ್ನು ಉನ್ನತೀಕರಿಸುತ್ತದೆ. ಲೋಕಗುರುಗಳು ಷಡೂರ್ಮಿಗಳನ್ನು ಗೆದ್ದರು; ಲೌಕಿಕರು ಉಪಾಯದಿಂದ ಅದರಿಂದ ದಾಟಿದರು. ಸಾಮಾನ್ಯರೂ ಅತಿಸಾಮಾನ್ಯರೂ ಷಡೂರ್ಮಿಗಳ ಜತೆ ಹೆಣಗಿದ್ದನ್ನು ಸಾಹಿತ್ಯ ಕಲೆಗಳು ಕಾಣಿಸಿವೆ. ದಾಸರು 'ಭವಾಬ್ಧಿ' ದಾಟಿದವ ಎಂದೂ 'ಕಠಿನ ಭವತೊರೆಯೊಳಗೆ' ಎಂದು ಹೇಳಿ, ಬಾಳ್ವೆಯ ಗುಟ್ಟಿನ ದಾರಿಯನ್ನು ಸೂಕ್ಷ್ಮವಾಗಿ ನಮಗೆ ತೋರಿಸಿದ್ದಾರೆ! ನಾವು ಆ ದಾರಿಗಳ ಕಡೆ ತುಸು ಗಮನ ಹರಿಸುವುದು ಒಳಿತು!

■ **ಪುರಂಜೀವಿ**

## ಮಾತೇ ಮುತ್ತು

- ವಿಚಾರ ಪರಿವರ್ತನವು ಒಂದು ಮಹಾಶಾಸ್ತ್ರ.
  —ವಿನೋಬಾ ಭಾವೆ
- ದುಷ್ಟ ವಿಚಾರಗಳು ದುಃಖಕ್ಕೆ ಮೂಲ ಕಾರಣ.
  —ಗೌತಮ ಬುದ್ಧ
- ಪ್ರಪಂಚದಲ್ಲಿ ಇರುವುದು ಎರಡೇ ಜಾತಿ; ಇರುವವರದು, ಇಲ್ಲದವರದು.
  —ಸೆರೆವಾಂಟೆಸ್
- ಮಾನವ ಜನಾಂಗವನ್ನು ಬಂಧುಗಳೆಂದು ನೋಡಬೇಕು.
  —ಕುರಾನ್
- ಅನುಭವವೊಂದು ಅಮೂಲ್ಯ ಅಪೂರ್ವ ವಜ್ರ. ಅದಕ್ಕಾಗಿ ಎಷ್ಟೋ ಜನರು ಬೆವರು, ರಕ್ತ ಸುರಿಸಿದ್ದಾರೆ.
  —ಶೇಕ್ಸ್‌ಪಿಯರ್
- ಬಡವರು ಧನ್ಯರು, ಏಕೆಂದರೆ ಸ್ವರ್ಗವೇ ಅವರದು.
  —ಏಸುಕ್ರಿಸ್ತ
- ಪ್ರೇಮವು ಪಾಪಿಯನ್ನು ಸುಧಾರಿಸುತ್ತದೆ.
  —ಟಾಲ್‌ಸ್ಟಾಯ್
- ಪ್ರೇಮ ಐಶ್ವರ್ಯದೊಂದಿಗೆ ಸಾಯುತ್ತದೆ.
  —ಹಾರ್ವೆ